## 11. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಬಿಲ್ಪತ್ರೆ , ಹೊಸನಗರ ತಾ॥ ಶಿವಮೊಗ್ಗ

**ಶಾಲೆಯ ಪರಿಚಯ :** ನಮ್ಮೂರ ಶಾಲೆ ಬಿಲ್ವತ್ರೆಯು, ಹೊಸನಗರ ತಾಲೂಕಿನ ಪುರಪ್ಪೇಮನೆ ಗ್ರಾಮ ಪಂಚಾಯ್ತಿಯ ವ್ಯಾಪ್ತಿಯಲ್ಲಿದ್ದು ಆಲಗೇರಿಮಂಡ್ರಿ ಕ್ಲಸ್ಟರ್‌ನಲ್ಲಿದೆ. ಶಾಲೆಯು ಹೊಸನಗರದಿಂದ 27 ಕಿಮೀ, ಸಾಗರದಿಂದ 18 ಕಿಮೀ, ಆನಂದಪುರದಿಂದ 12 ಕಿಮೀ ದೂರದಲ್ಲಿರುತ್ತದೆ. ಶಾಲೆಗೆ ಶಿವನಿಗೆ ಪ್ರಿಯವಾದ ಬಿಲ್ವತ್ರೆ ಎಂಬ ಹೆಸರು ಬರಲು ಬೇರೆ ಯಾವುದೇ ಐತಿಹಾಸಿಕ, ಧಾರ್ಮಿಕ ಐತಿಹ್ಯಗಳಿಲ್ಲ. ಬದಲಾಗಿ ಹೆಬ್ಬೈಲು ಗ್ರಾಮದಲ್ಲಿ ಈಗಾಗಲೇ ಒಂದು ಶಾಲೆ ಇರುವುದರಿಂದ ಬೇರೆ ಹೆಸರಿಂದ ಶಾಲೆಯನ್ನು ಮಂಜೂರು ಮಾಡಿಸಿಕೊಳ್ಳುವ ಅನಿವಾರ್ಯತೆ ಎದುರಾದಾಗ ಶಾಲೆಗಿಟ್ಟ ಹೆಸರು ಬಿಲ್ವತ್ರೆ ಎಂಬುದು ಹಿರಿಯರ ಅಭಿಪ್ರಾಯ.

" No school can grow beyond level of the teachers. "

ಎಂಬ ಮಾತಿಗೆ ನಮ್ಮ ಶಾಲೆಯನ್ನು ನೆನಪಿಸಿಕೊಂಡರೆ No school can grow beyond the level of the teachers, co-operation and support of the parents ಎಂಬ ಅಂಶವನ್ನು ಸೇರಿಸಲೇ ಬೇಕೆನಿಸುತ್ತದೆ. ಏಕೆಂದರೆ ನಮ್ಮ ಬಿಲ್ವತ್ರೆ ಶಾಲೆಯು ಪ್ರಗತಿ ಪಥದತ್ತ ಸಾಗುತ್ತಿದೆ ಎಂದರೆ ಅದಕ್ಕೆ ಪ್ರಮುಖ ಕಾರಣ ಸಮುದಾಯ. ಹೆಚ್ಚೇನು ಶಿಕ್ಷಣ ಹೊಂದಿರದ ಈ ಭಾಗದ ಜನರ ಮನದಲ್ಲಿ ನಮ್ಮ ಶಾಲೆಯೇ ಅತ್ಯುತ್ತಮ ಎಂಬ ಭಾವನೆ ಇತ್ತು. ಈ ಭಾವನೆಯನ್ನು ತೊಡೆಯಲೋಸುಗ ಮೊದಲು ಹಮ್ಮಿಕೊಂಡ ಕಾರ್ಯಕ್ರಮವೇ ಶಾಲಾ ಭೇಟಿ. 'ದೇಶ ಸುತ್ತು ಕೋಶ ಓದು' ಎಂಬ ನಾಣ್ಣುಡಿಯಂತೆ ನಮ್ಮ ಜ್ಞಾನ ಹಾಗೂ ಅನುಭವವನ್ನು ಉತ್ತಮ ಮಟ್ಟಕ್ಕೆ ಕೊಂಡೊಯ್ಯಲು ಬೇರೆ ಬೇರೆ ಶಾಲೆಗಳ ಭೇಟಿಯೇ ಪರಿಹಾರವಾಗಬಲ್ಲದೆಂಬ ಭಾವನೆಯಿಂದ ಹೊಸನಗರ ತಾಲೂಕಿನ ಉತ್ತಮ ಶಾಲೆಗಳಿಗೆ ಭೇಟಿ ಮಾಡಲಾಯ್ತು.

ಜನವರಿ 2017ರಲ್ಲಿ ಹಮ್ಮಿಕೊಂಡ ಈ ಶಾಲಾ ಭೇಟಿಯಿಂದ ಪ್ರತಿಯೊಬ್ಬರ ಮನದಲ್ಲೂ ನಮ್ಮ ಶಾಲೆಯನ್ನು ಅಭಿವೃದ್ಧಿಪಡಿಸಲು ನನ್ನದೇನಾದರೂ ಕೊಡುಗೆ ಇರಬೇಕೆಂಬ ಭಾವನೆ ಮೂಡಿದ್ದು ಧನಾತ್ಮಕ ಬೆಳವಣಿಗೆ. ಶಾಲಾ ಭೇಟಿಯಿಂದ ಹಿಂದಿರುಗಿದ ನಂತರದ ಸಭೆಯಲ್ಲಿ ಶಾಲಾ ಅಗತ್ಯಗಳನ್ನು ಪೂರೈಸಿಕೊಳ್ಳುವ ಸಲುವಾಗಿ ಸಂಪನ್ಮೂಲ ಕ್ರೋಢೀಕರಣಕ್ಕೆ ಮುಂದಾಗಲು ತೀರ್ಮಾನಿಸಲಾಯಿತು. ಸುಮ್ಮನೇ ಜನರ ಬಳಿಗೆ ಧನಸಂಗ್ರಹಕ್ಕೆ ತೆರಳುವುದಕ್ಕಿಂತ ವಾರ್ಷಿಕೋತ್ಸವ ಹಮ್ಮಿಕೊಂಡು ಪ್ರಾಯೋಜಕತ್ವ, ವಸ್ತುಗಳ ದೇಣಿಗೆ ಪಡೆಯಲು ಹೊರಟೆವು. ವಾರ್ಷಿಕೋತ್ಸವ ಹಮ್ಮಿಕೊಳ್ಳಲು ಕನಿಷ್ಠ ಒಂದು ರಂಗಮಂದಿರ ಅತ್ಯಗತ್ಯವೆನಿಸಿತು. ಆದರೆ ಅದಕ್ಕಾಗಿ ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಅನುದಾನಕ್ಕೆ ಕಾಯುತ್ತಾ ಕೂರದೆ ಕನಿಷ್ಠ ಬಯಲು ರಂಗಮಂದಿರ ನಿರ್ಮಿಸಿಕೊಳ್ಳಲು ತೀರ್ಮಾನಿಸಿ ಕೇವಲ ಜಂಬಿಟ್ಟಿಗೆ ಕಲ್ಲು, ಸಿಮೆಂಟ್ ಹಾಗೂ ಕುಶಲ ಮೇಸ್ತ್ರಿಗಳಿಗೆ ಮಾತ್ರ ಹಣ ನೀಡಿ ಉಳಿದ ಎಲ್ಲಾ ಕೆಲಸವನ್ನು ಪೋಷಕರು, ಶಿಕ್ಷಕರು ಹಾಗೂ ಮಕ್ಕಳ ಶ್ರಮದಿಂದಲೇ ಸುಮಾರು 45000/–( ನಲವತ್ತೈದು ಸಾವಿರ ರೂಗಳು) ಮೊತ್ತದ ಬಯಲು ಚಾವಡಿ ಸಿದ್ಧಗೊಂಡಿತು. ಕೇವಲ 20 ಮಕ್ಕಳಿಂದ ವಾರ್ಷಿಕೋತ್ಸವ ಮನರಂಜನಾ ಕಾರ್ಯಕ್ರಮ ನಿರ್ವಹಣೆ ಕಷ್ಟ ಸಾಧ್ಯವೆಂದರಿತು ಹಳೇ ವಿದ್ಯಾರ್ಥಿಗಳು, ಗ್ರಾಮಸ್ಥರು ಎಲ್ಲರ ಪ್ರತಿಭೆಗೂ ವೇದಿಕೆ ಒದಗಿಸಿ ಉತ್ತಮ ಕಾರ್ಯಕ್ರಮವನ್ನು ಶಾಲೆಯ ಮೊದಲ ಬಾರಿಗೆ ಹಮ್ಮಿಕೊಳ್ಳಲು ಪ್ರತಿಯೊಬ್ಬರ ಶ್ರಮ ಕಾರಣವಾಯಿತು. ಈ ಚಿಕ್ಕ ಹಳ್ಳಿಯಲ್ಲಿ ಮೊದಲ ಯಶಸ್ವೀ ಕಾರ್ಯಕ್ರಮ ಹಮ್ಮಿಕೊಳ್ಳುವ ಸಾಹಸಕ್ಕೆ ಕೈ ಹಾಕಿದ್ದರಿಂದ ಶಾಲೆಗೆ ವಸ್ತು

ರೂಪದಲ್ಲಿ ಹಾಗೂ ಧನ ಸಹಾಯ ಮಾಡುವ ಉದಾತ್ತ ಮನಸ್ಸುಗಳ ರೂಪದಲ್ಲಿ, ಶಾಲೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಪೋಷಕರ ರೂಪದಲ್ಲಿ ಒಂದೊಂದಾಗಿ ಹರಿದು ಬರತೊಡಗಿತು.

ಅವುಗಳಲ್ಲಿ :

| | |
|---|---|
| ಶಾಲೆಗೆ ಸುಣ್ಣ ಬಣ್ಣ | 15000/ |
| ದಾನಿಗಳಿಂದ ಎರಡು ಕಂಪ್ಯೂಟರ್‌ಗಳು ಸುಮಾರು | 50000/ |
| ಇನ್ವರ್ಟರ್ | 22000/ |
| ಸಿಂಹ ಲಾಂಛನ ಧ್ವಜಸ್ಥಂಭ | 18000/ |
| ಮಕ್ಕಳಿಗೆ ಆಟವಾಡಲು ಜಾರುಬಂಡಿ | 15000/ |
| ನಲಿಕಲಿ ಮಕ್ಕಳಿಗೆ 5 ರೌಂಡ್ ಟೇಬಲ್ ಸಿದ್ದಗೊಳ್ಳುತ್ತಿದ್ದು ಹಾಗೂ 20 ಕುರ್ಚಿಗಳಿಗಾಗಿ | 18000/ |

ಪೋಷಕರ ಸಹಕಾರದಿಂದ ಉತ್ತಮವಾದ ಜೋಕಾಲಿ ಹಾಗೂ ಸುಮಾರು 30 ಜನರು ಕೂರಬಹುದಾದ ಗಟ್ಟಿ ಮುಟ್ಟಾದ ಕುಟೀರ ನಿರ್ಮಾಣ ಮಾಡುವುದರ ಮೂಲಕ ಶಾಲೆಯನ್ನು ಶಿಶು ಸ್ನೇಹಿಯಾಗಿಸುವತ್ತ ಹೆಜ್ಜೆ ಇಡಲಾಗುತ್ತಿದೆ.

ಇದರ ಜೊತೆಗೆ ಹಿಂದಿನ ಕ್ರಿಯಾಶೀಲ ಮುಖ್ಯೋಪಾಧ್ಯಾಯರ ಶ್ರಮದಿಂದ ಪೋಷಕರ ಸಹಕಾರದಿಂದ ಎರಡು ಕೊಠಡಿಗಳ ನಡುವಿನ ಖಾಲಿ ಜಾಗವನ್ನು ಒಂದು ಕೊಠಡಿಯಾಗಿ ಪರಿವರ್ತಿಸಲು (ಸುಮಾರು 85000/– ಎಂಬತ್ತೈದು ಸಾವಿರ ರೂಗಳ ವೆಚ್ಚದಲ್ಲಿ) ಶ್ರಮಿಸಿದ್ದು ಹಾಗೂ ಪೋಷಕರ ಮತ್ತು ವಿದ್ಯಾ ಗಣಪತಿ ಸೇವಾ ಸಮಿತಿಯವರ ಸಹಕಾರದಿಂದ  ಮಕ್ಕಳಿಗೆ 10 (50 ಮಕ್ಕಳು ಕೂರುವಷ್ಟು) ಬೆಂಚುಗಳ ವ್ಯವಸ್ಥೆ ಮಾಡಿಕೊಂಡಿರುವುದು ಶಾಲೆಯ ಹೆಗ್ಗಳಿಕೆಯಾಗಿದೆ.

**ಸಮುದಾಯದ ಪಾಲ್ಗೊಳ್ಳುವಿಕೆಗಾಗಿ :**

- ಕಳೆದೆರಡು ವರ್ಷಗಳಿಂದ ಜನವರಿ 26 ರ ಗಣ ರಾಜ್ಯೋತ್ಸವವನ್ನು ಅದ್ದೂರಿಯಾಗಿ ( ಶಾಲಾ ಮಕ್ಕಳ ಹಾಗೂ ಗ್ರಾಮಸ್ಥರ ಸಹಕಾರದಿಂದ ಹೋಳಿಗೆ ಸಿಹಿಯನ್ನು ಜನವರಿ 25 ಕ್ಕೇ ಸಿದ್ಧಪಡಿಸುವುದರ ಮೂಲಕ) ಹೆಚ್ಚಿನ ಪೋಷಕರ ಪಾಲ್ಗೊಳ್ಳುವಿಕೆ ಆಚರಿಸುತ್ತಿರುವುದು.
- ಶಾಲಾ ಪ್ರವಾಸದಲ್ಲಿ ಪೋಷಕರು ಹಾಗೂ ಗ್ರಾಮಸ್ಥರಿಗೆ ಅವಕಾಶ ಕಲ್ಪಿಸಿರುವುದು.
- ವಾರ್ಷಿಕೋತ್ಸವ ಪ್ರಯುಕ್ತ ಎಲ್ಲಾ ಪೋಷಕರಿಗೆ ಹಾಗೂ ಗ್ರಾಮಸ್ಥರಿಗೂ ಆಟೋಟ ಸ್ಪರ್ಧೆಗಳು.
- ವಾರ್ಷಿಕೋತ್ಸವ ವೇದಿಕೆಯಲ್ಲಿ ಗ್ರಾಮೀಣ ಕಲಾ ಪ್ರದರ್ಶನಕ್ಕೆ ಅವಕಾಶ ನೀಡುತ್ತಿರುವುದು.

**ಶಾಲಾ ಮಕ್ಕಳಿಗಾಗಿ:**

- 2018–19 ನೇ ಶೈಕ್ಷಣಿಕ ವರ್ಷದ ಆರಂಭದಿಂದಲೇ ಕಂಪ್ಯೂಟರ್ ಬಳಕೆ ಬಗ್ಗೆ ಅರಿವು ಮಕ್ಕಳೇ ಸ್ವತಃ ಬಳಸುವಂತೆ ಪ್ರೇರೇಪಣೆ ಹಾಗೂ ಕಂಪ್ಯೂಟರ್ ಆಧಾರಿತವಾಗಿ ಬೋಧನೆ.

- ಇಂಗ್ಲಿಷ್ ಶಿಕ್ಷಣಕ್ಕೆ ಒತ್ತು ನೀಡಲಾಗುತ್ತಿದೆ.

- ಗಾರ್ಡನ್ ಅಭಿವೃದ್ಧಿಗೆ ಶ್ರಮ ವಹಿಸುತ್ತಿರುವುದು ತನ್ಮೂಲಕ ಮಕ್ಕಳಲ್ಲಿ ಪರಿಸರ ಪ್ರಜ್ಞೆ ಮೂಡುವಂತೆ ಮಾಡುತ್ತಿರುವುದು.

- ಕಲಿಯಲು ಭಯ ರಹಿತ ಮುಕ್ತ ವಾತಾವರಣ ನಿರ್ಮಾಣ ಮಾಡಿರುವುದು.

- 3, 4 ಮತ್ತು 5 ನೇ ತರಗತಿಯ ಮಕ್ಕಳಿಗೆ ಅನೌಪಚಾರಿಕವಾಗಿ ಹಿಂದಿ ಭಾಷೆಯ ವರ್ಣಮಾಲೆ , ಕಾಗುಣಿತ ಪರಿಚಯ ಮಾಡುವ ಮೂಲಕ 6 ನೇ ತರಗತಿಗೆ ಹೊಸ ಶಾಲೆ ಹಾಗೂ ಹೊಸ ಭಾಷೆಯನ್ನು ಪರಿಚಯ ಮಾಡಿಕೊಳ್ಳುವಾಗಿನ ದುಗುಡ ಹಾಗೂ ಭಯವನ್ನು ದೂರಮಾಡಿ ಆತ್ಮ ವಿಶ್ವಾಸ ಮೂಡಲು ಸಹಾಯಕ.

**"ಸಾವಿರ ಮೈಲುಗಳ ಪ್ರಯಾಣ ಕೂಡ ಪ್ರಾರಂಭವಾಗುವುದು ಆತ್ಮ ವಿಶ್ವಾಸ ಭರಿತ ಪ್ರಥಮ ಹೆಜ್ಜೆಯ ಮೂಲಕವೆ"** ಎಂಬಂತೆ ಶಾಲೆಯ ಅಭಿವೃದ್ಧಿ ಯಾನದಲ್ಲಿ ನಮ್ಮ ತಂಡದೊಂದಿಗೆ ಮೊದಲ ಹೆಜ್ಜೆಯಿಟ್ಟ ಸಾರ್ಥಕ ಭಾವ ನನ್ನದಾಗಿದೆ.

**ಶ್ರಮದಾನದಲ್ಲಿ ನಿರತರಾದ ಪೋಷಕರು**





**ಗಿಡ ನೆಡುವುದರಲ್ಲಿ ನಿರತರಾದ ಮಕ್ಕಳು**

ನಮ್ಮೂರ ಶಾಲೆ ಬಿಲ್ಪತ್ರೆ ,
ಹೊಸನಗರ ತಾಆಟದಲ್ಲಿ
ನಿರತರಾದ ಮಕ್ಕಳು





ಉದ್ಯಾನ ವನದಿ
ಚಿಟ್ಟೆಗಳು

ಶ್ರಮದಾನದಲ್ಲಿ
ನಿರತರಾದ
ಪೋಷಕರು





ಟ್ಯಾನ್ ಗ್ರ್ಯಾಮ್
ನಲ್ಲಿ ನಿರತರಾದ
ಮಕ್ಕಳು